# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 252 | Pages. 2 | Date: 19-09-2026, SATURDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 252 - ಪುಟಗಳು : 2 | 19-09-2026 ಶನಿವಾರ | Ph: 8762954248 | ದರ : ₹1


# ಹಾಸನ: ದೇವಿಗೆರೆ ಪಾವಿತ್ರ್ಯಕ್ಕೆ ಧಕ್ಕೆ

## 100 ಮೀಟರ್ ಒಳಗೆ ಬಾರ್ ನಿರ್ಮಾಣಕ್ಕೆ ಸಾರ್ವಜನಿಕರ ತೀವ್ರ ವಿರೋಧ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ನಗರದ ಇತಿಹಾಸ, ಧಾರ್ಮಿಕ ಪರಂಪರೆ ಹಾಗೂ ಆಧ್ಯಾತ್ಮಿಕ ನಂಬಿಕೆಯೊಂದಿಗೆ ಬೆಸೆದುಕೊಂಡಿರುವ ಐತಿಹಾಸಿಕ 'ದೇವಿಗೆರೆ' ತೀವ್ರ ನಿರ್ಲಕ್ಷ್ಯಕ್ಕೆ ಒಳಗಾಗಿದ್ದು, ದೇವಸ್ಥಾನದ 100 ಮೀಟರ್ ವ್ಯಾಪ್ತಿಯೊಳಗೆ ಹೊಸ ಬಾರ್ ನಿರ್ಮಾಣಕ್ಕೆ ಅನುಮತಿ ನೀಡುತ್ತಿರುವುದು ಸಾರ್ವಜನಿಕರ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಬಿಜೆಪಿ ಮುಖಂಡ ವೇಣುಗೋಪಾಲ್, ಜಿಲ್ಲಾಡಳಿತ ಹಾಗೂ ಮುಜರಾಯಿ ಇಲಾಖೆಯ ನಿರ್ಲಕ್ಷ್ಯದ ವಿರುದ್ಧ ಹರಿಹಾಯ್ದಿದ್ದಾರೆ. ಸಪ್ತಮಾತ್ರಿಕೆಯರ ಪೈಕಿ ಮೂವರು ದೇವಿಯರಾದ ಇಂದ್ರಾಣಿ, ವಾರಾಹಿ ಮತ್ತು ಚಾಮುಂಡಿ ನೆಲೆಸಿರುವ ದೇವಿಗೆರೆಯನ್ನು ಸಂರಕ್ಷಿಸುವ ಜವಾಬ್ದಾರಿಯನ್ನು ಮರೆತು ಕಸದ ಕೂಪವಾಗಿ ಮಾರ್ಪಡಲು ಬಿಡಲಾಗಿದೆ ಎಂದು ಆರೋಪಿಸಿದ್ದಾರೆ.

ಹೊಸ ಬಾರ್‌ಗೆ ಅನುಮತಿ: ಸಾರ್ವಜನಿಕರ ವಿರೋಧ

ಕಸ್ತೂರಬಾ ರಸ್ತೆಯಲ್ಲಿ ದೇವಿಗೆರೆಯ ದೇವಸ್ಥಾನದಿಂದ ಕೇವಲ 100 ಮೀಟರ್ ಒಳಗೆ ಹೊಸ ಬಾರ್‌ಗೆ ಅನುಮತಿ ನೀಡಲಾಗುತ್ತಿದೆ. ಮುಜರಾಯಿ ಇಲಾಖೆ ನಿಯಮ ಹಾಗೂ ಭಕ್ತರ ಧಾರ್ಮಿಕ ಭಾವನೆಗಳನ್ನು ಗಾಳಿಗೆ ತೂರಿ ಬಾರ್‌ಗೆ ಅನುಮತಿ ನೀಡುವ ಪ್ರಯತ್ನವನ್ನು ಸಾರ್ವಜನಿಕರು ತೀವ್ರವಾಗಿ ವಿರೋಧಿಸಿದ್ದಾರೆ. ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ, ಬಾರ್ ಕಾಮಗಾರಿ ಮುಂದುವರಿಯುತ್ತಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ತಕ್ಷಣವೇ ಜಿಲ್ಲಾಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಬಾರ್‌ಗೆ ಅನುಮತಿ ನೀಡದಂತೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಲಾಗಿದೆ.







ಶ್ರೀ ಚನ್ನಕೇಶವಸ್ವಾಮಿ ಮತ್ತು ಕೊಳಲು ಗೋಪಾಲಕೃಷ್ಣಸ್ವಾಮಿ ಸೇವಾ ಕೈಂಕರ್ಯ ಟ್ರಸ್ಟ್ ಹಾಸನ.

ದಿನಾಂಕ 11-06-2026

ಗೆ,
ಮಾನ್ಯ ಜಿಲ್ಲಾಧಿಕಾರಿಗಳು,
ಹಾಸನ ಜಿಲ್ಲೆ,
ಹಾಸನ.

ಮಾನ್ಯರೇ,

ವಿಷಯ : ಹಾಸನ ನಗರದ ಕಸ್ತೂರಬಾ ರಸ್ತೆಯಲ್ಲಿ ಬಾರ್ ಆರಂಬಿಸಲು ಅನುಮತಿ ನೀಡದಿರುವ ಕುರಿತು ಮನವಿ.

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಹಾಸನ ನಗರದ ಪ್ರಮುಖವಾದ ಕಸ್ತೂರಬಾ ರಸ್ತೆಯಲ್ಲಿ ಬಾರ್ ಆರಂಬಿಸಲು ಪ್ರಯತ್ನಗಳು ನಡೆಯುತ್ತಿರುವುದು ಸಾರ್ವಜನಿಕರ ಗಮನಕ್ಕೆ ಬಂದಿದೆ.

ಪ್ರಸ್ತಾವಿಕ ಬಾರ್ ಸ್ಥಳವು ಹಾಸನದ ಇತಿಹಾಸ ಪ್ರಸಿದ್ಧ ದೇವಿಗೆರೆಯಲ್ಲಿರುವ ಪುರಾತನ ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನದಿಂದ ಕೇಲವ 50 ಮೀಟರ್ ಅಂತರದಲ್ಲಿದೆ. ಸರ್ಕಾರದ ನಿಯಮಾವಳಿಗಳ ಪ್ರಕಾರ ದೇವಸ್ಥಾನ, ಶಾಲೆ ಹಾಗೂ ಇತರ ಧಾರ್ಮಿಕ ಮತ್ತು ಸಾರ್ವಜನಿಕ ಸಂಸ್ಥೆಗಳ ಸಮೀಪದಲ್ಲಿ ಬಾರ್ ಅಥವಾ ವೈನ್ ಶಾಪ್‌ಗಳಿಗೆ ಪರವಾನಗಿ ನೀಡಲು ನಿಗದಿತ ಅಂತರದ ಮಿತಿಯನ್ನು ಪಾಲಿಸಬೇಕಾಗುತ್ತದೆ. ಈ ಹಿನ್ನಲೆಯಲ್ಲಿ ದೇವಸ್ಥಾನಕ್ಕೆ ಅತ್ಯಂತ ಸಮೀಪದಲ್ಲಿ ಬಾರ್ ಆರಂಭಿಸುವುದು ನಿಯಮಗಳ ಉಲಂಘನೆಯಾಗುವ ಸಾಧ್ಯತೆಯಿದೆ.

ಇದಲ್ಲದೆ, ಈ ಪ್ರದೇಶಕ್ಕೆ ಪ್ರತಿನಿತ್ಯ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ,ಮಹಿಳೆಯರು, ಹಿರಿಯ ನಾಗರೀಕರು ಹಾಗೂ ಸಾರ್ವಜನಿಕರು ಆಗಮಿಸುತ್ತಾರೆ. ಇಂತಹ ಪ್ರದೇಶದಲ್ಲಿ ಬಾರ್ ಆರಂಭಗೊಂಡರೆ ಸಾರ್ವಜನಿಕ ಶಾಂತಿ, ಧಾರ್ಮಿಕ ವಾತಾವರಣ ಹಾಗೂ ಭಕ್ತರ ಸಂಚಾರಕ್ಕೆ ತೊಂದರೆ ಉಂಟಾಗುವ ಸಾಧ್ಯತೆ ಇದೆ. ಸ್ಥಳೀಯ ನಿವಾಸಿಗಳಲ್ಲಿಯೂ ಆತಂಕ ಮೂಡಿರುವುದು ಗಮನಾರ್ಹವಾಗಿದೆ.

ಆದ್ದರಿಂದ ಸಾರ್ವಜನಿಕ ಹಿತಾಸಕ್ತಿ ಹಾಗೂ ಧಾರ್ಮಿಕ ಭಾವನೆಗಳನ್ನು ಪರಿಗಣಿಸಿ, ಕಸ್ತೂರಬಾ ರಸ್ತೆಯಲ್ಲಿ ಪ್ರಸ್ತಾವಿತ ಬಾರ್‌ಗೆ ಯಾವುದೇ ಕಾರಣಕ್ಕೂ ಅನುಮತಿ ನೀಡದಂತೆ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ತಮ್ಮಲ್ಲಿ ವಿನಮ್ರವಾಗಿ ಮನವಿ ಮಾಡಿಕೊಳ್ಳುತ್ತೇವೆ.

ಧನ್ಯವಾದಗಳು.

ವಂದನೆಗಳೊಂದಿಗೆ, ಇಂತಿ ತಮ್ಮ ವಿಶ್ವಾಸಿ

ಅಧ್ಯಕ್ಷರು

ದೇವಿಗೆರೆಯಲ್ಲಿ ತಾಂಡವವಾಡುತ್ತಿರುವ ಅವ್ಯವಸ್ಥೆಗಳು:

ದುರ್ವಾಸನೆ ಬೀರುತ್ತಿರುವ ಪಾರ್ಕಿಂಗ್: ದೇವಿಗೆರೆಯ ಪಾರ್ಕಿಂಗ್ ಪ್ರದೇಶದಲ್ಲಿ ಎಲ್ಲೆಂದರಲ್ಲಿ ಮೂತ್ರ ವಿಸರ್ಜನೆ ಮಾಡುತ್ತಿರುವುದರಿಂದ ಭಕ್ತರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಇದೆ. ಸಮರ್ಪಕ ಶೌಚಾಲಯ ಹಾಗೂ ಸ್ವಚ್ಛತಾ ವ್ಯವಸ್ಥೆ ಕಲ್ಪಿಸುವಲ್ಲಿ ಆಡಳಿತ ವಿಫಲವಾಗಿದೆ.

ನಿರ್ಲಕ್ಷ್ಯಕ್ಕೊಳಗಾದ ಈಶ್ವರ, ಗಣಪತಿ ದೇವಸ್ಥಾನ: ದೇವಿಗೆರೆಯ ದಕ್ಷಿಣ ಭಾಗದಲ್ಲಿರುವ ಈಶ್ವರ ಮತ್ತು ಗಣಪತಿ ದೇವಸ್ಥಾನಗಳು ಸೂಕ್ತ ನಿರ್ವಹಣೆಯಿಲ್ಲದೆ ಸೊರಗಿವೆ. ಪೂಜೆ ಸಲ್ಲಿಸುವವರಿಗೂ ಕನಿಷ್ಠ ಮೂಲಸೌಕರ್ಯಗಳಿಲ್ಲ.

ಹೂಳೆತ್ತದ ಕೊಳ: ದೇವಿಗೆರೆಯ ಕೊಳದ ಹೂಳು ತೆಗೆದು ಸ್ವಚ್ಛಗೊಳಿಸಿ ಹಲವು ವರ್ಷಗಳೇ ಕಳೆದಿವೆ. ಕೂಡಲೇ ನೀರಿನ ಸ್ವಚ್ಛತೆ ಕಾಪಾಡಿ, ಸುತ್ತಮುತ್ತಲಿನ ಪ್ರದೇಶವನ್ನು ಅಭಿವೃದ್ಧಿಪಡಿಸುವ ಕಾರ್ಯವಾಗಬೇಕಿದೆ.

ಸಪ್ಪೆಯಾದ ಗೋಕುಲಾಷ್ಟಮಿ: ಹಾಸನ ನಗರದ ಏಕೈಕ 'ಕೊಳಲು ಗೋಪಾಲಕೃಷ್ಣ ದೇವಸ್ಥಾನ'ದಲ್ಲಿ ನಡೆಯುವ ಗೋಕುಲಾಷ್ಟಮಿ ಹಬ್ಬಕ್ಕೆ ಸರ್ಕಾರ ಹಾಗೂ ಮುಜರಾಯಿ ಇಲಾಖೆಯ ಬೆಂಬಲದ ಕೊರತೆಯಿಂದ ಈ ಬಾರಿ ನಿರೀಕ್ಷಿತ ಮಟ್ಟದ ಕಳೆ ಇರಲಿಲ್ಲ.

ಹಾಸನಾಂಬ ಜಾತ್ರೆಯಲ್ಲಿ ದೇವಿಗೆರೆಗೆ ಸಿಗಲಿ ವಿಶೇಷ ಆದ್ಯತೆ

ಮುಂಬರುವ ಹಾಸನಾಂಬ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ದೇವಿಗೆರೆಯನ್ನು ಕೇವಲ ಬಣ್ಣ ಬಳಿಯುವುದಕ್ಕೆ ಮಾತ್ರ ಸೀಮಿತಗೊಳಿಸಬಾರದು. ಬದಲಾಗಿ ದೀಪಾಲಂಕಾರ, ಹೂವಿನ ಅಲಂಕಾರ, ವಾಟರ್ ಫೌಂಟನ್ ಹಾಗೂ ಆಕರ್ಷಕ ಸೌಂದರ್ಯೀಕರಣ ಮಾಡುವ ಮೂಲಕ ಜಾತ್ರೆಯ ಪ್ರಮುಖ ಆಕರ್ಷಣೆಯನ್ನಾಗಿ ಮಾಡಬೇಕು ಎಂದು ಆಗ್ರಹಿಸಲಾಗಿದೆ.

ದೇವಸ್ಥಾನದ ಪಾವಿತ್ರ್ಯಕ್ಕಿಂತ ಯಾವುದೇ ವಾಣಿಜ್ಯ ಹಿತಾಸಕ್ತಿ ದೊಡ್ಡದಲ್ಲ. ಇಂತಹ ಪುಣ್ಯಕ್ಷೇತ್ರವನ್ನು ಹಾಳಾಗಲು ಬಿಡುವುದು ಹಾಸನದ ಜನರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಂತೆ. ಇನ್ನಾದರೂ ಜಿಲ್ಲಾಡಳಿತ ಹಾಗೂ ಮುಜರಾಯಿ ಇಲಾಖೆ ಎಚ್ಚೆತ್ತುಕೊಂಡು ದೇವಿಗೆರೆಯ ಪಾವಿತ್ರ್ಯ ಹಾಗೂ ಘನತೆಯನ್ನು ಕಾಪಾಡಲು ಮುಂದಾಗಬೇಕು ಎಂದು ಸಾರ್ವಜನಿಕರ ಪರವಾಗಿ ಬಿಜೆಪಿ ಮುಖಂಡ ವೇಣುಗೋಪಾಲ್ ಎಚ್ಚರಿಕೆ ನೀಡಿದ್ದಾರೆ.

# ಇಡಿ ದಾಳಿ ಖಂಡಿಸಿ ನಾಳೆ ಪ್ರತಿಭಟನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕೆಲವು ದಿನಗಳ ಹಿಂದೆ, ಕೇಂದ್ರ ಸರ್ಕಾರದ ಅಡಿಯಾಳಾಗಿರುವ ಇಡಿ ಇಲಾಖೆಯು ರಾಜ್ಯದ ಜನಪರ ಚಳುವಳಿ ಮತ್ತು ಅಹಿಂದ ವರ್ಗಗಳ ಮುಂಚೂಣಿ ನಾಯಕ ಮತ್ತು ಲೋಕೋಪಯೋಗಿ ಸತೀಶ್ ಜಾರಕಿಹೊಳಿ ಅವರ ನಿವಾಸ ಮತ್ತು ಕಚೇರಿಗಳ ಮೇಲೆ ದಾಳಿ ನಡೆಸಿರುವುದನ್ನು ಖಂಡಿಸಿ ಸಂವಿಧಾನ ಸಂರಕ್ಷಣಾ ವೇದಿಕೆ ಹಾಸನ ಘಟಕದಿಂದ ನಾಳೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ಕಾಂಗ್ರೆಸ್ ಪಕ್ಷದ ನಾಯಕರ ಮೇಲೆ ಅದರಲ್ಲೂ ಅಹಿಂದ ವರ್ಗಗಳ ನಾಯಕರ ಮೇಲೆ ಈ ರೀತಿ ಹುಸಿ ದಾಳಿ ನಡೆಸಿ ಅವರನ್ನು ತೇಜೋವಧೆ ಮಾಡುವುದು ಮನುವಾದಿಗಳ ಕುತಂತ್ರವಾಗಿದೆ.

ಸತೀಶ ಜಾರಕಿಹೊಳಿ ಅವರು ತಮ್ಮ ಬದುಕಿನುದ್ದಕ್ಕೂ ಸಂವಿಧಾನ ಮೌಲ್ಯಗಳನ್ನು ಸಮಾಜದ ಒಳಗೆ ಅನುಷ್ಠಾನಗೊಳಿಸುವ ಪ್ರಾಮಾಣಿಕ ಪ್ರಯತ್ನ ನಡೆಸಿದ್ದಾರೆ, ಈಗಲೂ ನಡೆಸುತ್ತಿದ್ದಾರೆ.

ಇಂತಹ ಸಮಾಜಮುಖಿ ನಾಯಕರ ಮೇಲೆ ರಾಜಕೀಯ ದುರುದ್ದೇಶದಿಂದ ದಾಳಿ ನಡೆಸಿರುವುದನ್ನು ಖಂಡಿಸಿ, ಜಿಲ್ಲೆಯ ಜನಪರ ಸಂಘಟನೆಗಳ ಪರವಾಗಿ ಸತೀಶ್ ಜಾರಕಿ ಹೊಳಿ ಅವರನ್ನು ನೈತಿಕವಾಗಿ ಬೆಂಬಲಿಸಲು ಶನಿವಾರ ಬೆಳಗ್ಗೆ 10:30ಕ್ಕೆ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ನಡೆಯಲಿದೆ.

ಎಲ್ಲ ಜನಪರ, ಪ್ರಗತಿಪರ, ಹಿಂದುಳಿದ, ದಲಿತ ಚಳುವಳಿಗಳ ನಾಯಕರು, ಕಾಂಗ್ರೆಸ್ ಮುಖಂಡರು ಪ್ರತಿಭಟನೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗಿ ಜನಪರ ನಾಯಕನಿಗೆ ಬೆಂಬಲ ನೀಡಬೇಕೆಂದು ಜಿಲ್ಲಾ ವಾಲ್ಮೀಕಿ ಸಮಾಜದ ಅಧ್ಯಕ್ಷ ಮಧುನಾಯಕ ಮನವಿ ಮಾಡಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮಧು ನಾಯಕ- 9880565634, ಶ್ರೀನಿವಾಸ ಕೆ.ಎಸ್ 9113608820 ಇವರನ್ನು ಸಂಪರ್ಕಿಸುವಂತೆ ಕೋರಿದ್ದಾರೆ.

# ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವ ಬಗೆ ಕಲಿಯಿರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪದವಿ ಹಂತದಲ್ಲೇ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ಬಗೆಯನ್ನು ಕಲಿಯುವ ಮೂಲಕ ಸಮಾಜದಲ್ಲಿನ ಉನ್ನತ ಹುದ್ದೆಗಳನ್ನು ಏರಬೇಕು ಎಂದು ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ನೌಶದ್ ಎಚ್.ಅಭಿಪ್ರಾಯಪಟ್ಟರು.



ನಗರದ ಗಂಧದಕೋಠಿ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗ ಹಾಗೂ ಐ.ಕ್ಯೂ.ಎ.ಸಿ. ಘಟಕದ ವತಿಯಿಂದ ಶುಕ್ರವಾರ ಹಮ್ಮಿಕೊಂಡಿದ್ದ ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ದತೆ ವಿಷಯ ಕುರಿತು ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸ್ಪರ್ಧಾತ್ಮ ಪರೀಕ್ಷೆ ಎದುರಿಸಲು ಬೇಕಾದ ಪೂರಕ ವಾತಾವರಣವನ್ನು ಮನೆಗಳಲ್ಲಿ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ನಿರ್ಮಾಣ ಮಾಡಬೇಕು. ದಿನಪತ್ರಿಕೆ ಓದುವ ಹವ್ಯಾಸ ಹಾಗೂ ವಿಶ್ವದಲ್ಲಿ ನಡೆಯುವ ಪ್ರಮುಖ ಘಟನಾವಳಿಗಳ ಬಗ್ಗೆ ಮಾಹಿತಿ ಪಡೆದು ಸಾಮಾನ್ಯ ಜ್ಞಾನ ಸೇರಿದಂತೆ ಪರೀಕ್ಷೆಗೆ ಬೇಕಾಗುವ ಎಲ್ಲಾ ಸಿದ್ಧತೆ ಮಾಡಿಕೊಳ್ಳಬೇಕು. ಯುವ ಪೀಳಿಗೆಯಲ್ಲಿರುವವರು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಭಾಗವಹಿಸುವುದನ್ನು ಹೆಚ್ಚು ಕಲಿಯಬೇಕು. ಪರೀಕ್ಷಾ ಭಯ ಬಿಟ್ಟು ಜೀವನದಲ್ಲಿ ಸಾಧನೆ ಮಾಡುವ ಹಂಬಲದಿಂದ ಪರೀಕ್ಷೆಯನ್ನು ಗೆದ್ದೇ ಗೆಲ್ಲುತ್ತೇವೆ ಎಂಬ ಧೈರ್ಯ ಇಟ್ಟುಕೊಂಡು ಮುಂದಿನ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಸರ್ಕಾರಿ ಗೃಹ ವಿಜ್ಞಾನ ಕಾಲೇಜಿನ ರಾಜ್ಯಶಾಸ್ತ್ರ ಉಪನ್ಯಾಸಕ ಎಂ.ಆರ್. ರಾಮಚಂದ್ರ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಗುರಿ ಕಡೆಗೆ ಗಮನಹರಿಸಬೇಕು ಹಾಗೂ ಎಲ್ಲರೂ ಗೆಲ್ಲಬೇಕು. ಈ ಪ್ರಜಾಪ್ರಭುತ್ವದ ವ್ಯವಸ್ಥೆ ಯಶಸ್ವಿ ಆಗಬೇಕಾದರೆ ಎಲ್ಲರೂ ತಮ್ಮ ಶ್ರಮ ಮತ್ತು ಆಲೋಚನೆಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು. ರಾಜಕೀಯ ಬದಲಾವಣೆ ತರಬೇಕೆಂದರೆ ಅದರ ಬಗ್ಗೆ ಜ್ಞಾನ ಇರಬೇಕು. ಡಿಜಿಟಲ್ ಯುಗದಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಂಡಾಗ ಸುಧಾರಣೆ ಮಾಡಲು ಸಾಧ್ಯ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಮಂಜಯ್ಯ ಡಿ.ಕೆ. ಮಾತನಾಡಿ, ಇದು ಸ್ಪರ್ಧಾತ್ಮಕ ಪ್ರಪಂಚ, ಎಲ್ಲರೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಧ್ಯಯನ ಮಾಡಿ ಒಳ್ಳೆಯ ಉದ್ಯೋಗ ಪಡೆದುಕೊಳ್ಳಬೇಕು ಎಂದರು. ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ. ಸುನೀತ ಜಿ., ಐ.ಕ್ಯೂ.ಎ.ಸಿ. ಘಟಕದ ಸಂಚಾಲಕ ಡಾ. ಕಾಂತೇಶ್, ಉಪನ್ಯಾಸಕ ಲೋಕೇಶ್ ಎಚ್.ಡಿ ಇದ್ದರು.

# ಅರ್ಚಕರಿಗೆ ಎಸಿ ಖಡಕ್ ಸೂಚನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಾಲೂಕಿನ ಮಳಲಿ ಗ್ರಾಮದ ಐತಿಹಾಸಿಕ ಶ್ರೀ ಲಕ್ಷ್ಮೀದೇವಿ ದೇವಾಲಯದ ಅರ್ಚಕರ ನಡುವಿನ ಜಟಾಪಟಿ ಹಿನ್ನೆಲೆಯಲ್ಲಿ ಉಪ ವಿಭಾಗಾಧಿಕಾರಿ ಜಗದೀಶ್ ಗಂಗಣ್ಣನವರ್ ಖಡಕ್ ಸೂಚನೆ ನೀಡಿದ್ದಾರೆ.

ಇಂದು ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇವಾಲಯ ಆವರಣದಲ್ಲಿ ಅರ್ಚಕರು ಹಾಗೂ ಅರ್ಚಕರ ಕುಟುಂಬದವರ ಜೊತೆ ಸಭೆ ಮಾಡಿ ಕಟ್ಟುನಿಟ್ಟಿನ ಸೂಚನೆ ನೀಡಿದ್ದೇವೆ ಎಂದರು.

ಮೊದಲಿನಿಂದಲೂ 24 ಕುಟುಂಬಗಳ ತಲಾ ಒಬ್ಬರು ವಂಶ ಪಾರಂಪರ್ಯವಾಗಿ ಪೂಜೆ ಮಾಡುತ್ತಾ ತಸ್ತಿಕ್ ಪಡೆಯುತ್ತಿದ್ದರು.



ಅವರಲ್ಲಿ 9 ಮಂದಿ ಮರಣ ಹೊಂದಿದ್ದಾರೆ. ಅವರಲ್ಲಿ ಐವರು ತಸ್ತಿಕ್ ತೆಗೆದುಕೊಳ್ಳುತ್ತಿರಲಿಲ್ಲ, ನಾಲ್ಕು ಜನ ಮಾತ್ರ ತಸ್ತಿಕ್ ತೆಗೆದುಕೊಳ್ಳುತ್ತಿದ್ದರು ಎಂದು ವಿವರಿಸಿದರು.

ಸದ್ಯ 6 ಜನ ಅರ್ಚಕರ ನೇಮಕಾತಿ ಆಗಿದೆ, ಉಳಿದವರನ್ನು ಕಾನೂನು ಬದ್ಧವಾಗಿ ನೇಮಕ ಮಾಡುತ್ತೇವೆ. ಆರು ಜನ ಅರ್ಚಕರ ಜೊತೆಗೆ ಉಳಿದ 19 ಮಂದಿ ಅರ್ಚಕರು ಮಾತ್ರ ಪೂಜೆ ಸಲ್ಲಿಸಬೇಕು ಎಂದರು.

ಅರ್ಚಕರ ಕುಟುಂಬದ ಯಾರೊಬ್ಬರೂ ಗರ್ಭಗುಡಿ ಪ್ರವೇಶಿಸಿ ಪೂಜೆ ಸಲ್ಲಿಸುವಂತಿಲ್ಲ, 19 ಜನ ಅರ್ಚಕರು ತಮ್ಮ ತಮ್ಮ ಸರದಿ ಬಂದಾಗ ಮಾತ್ರ ಪೂಜೆ ಸಲ್ಲಿಸಬೇಕು. ಅರ್ಚಕರೇ ಗರ್ಭಗುಡಿ ಸ್ವಚ್ಛ ಮಾಡಬೇಕು, ಬೇರೆ ಯಾವುದೇ ವ್ಯಕ್ತಿ ಗರ್ಭಗುಡಿ ಪ್ರವೇಶ ಮಾಡುವಂತಿಲ್ಲ, ದೇವಸ್ಥಾನದ ಪಾವಿತ್ರತಕ್ಕೆ ಧಕ್ಕೆ ತರುವಂತಿಲ್ಲ ಎಂದು ತಾಕೀತು ಮಾಡಿದರು.

ಸೂಚನೆ ಉಲ್ಲಂಘನೆ ಮಾಡಿದರೆ ಶಿಸ್ತ ಕ್ರಮ ಜೊತೆಗೆ ಕಾನೂನು ಕ್ರಮ ಕೈಗೊಳ್ಳುತ್ತೇವೆ ಎಂದ ಅವರು, ದೇವಾಲಯದಲ್ಲಿ ಸಿಸಿಟಿವಿ ಅಳವಡಿಸಲು ಸೂಚನೆ ನೀಡಲಾಗಿದೆ. ಉಪ ವಿಭಾಗಾಧಿಕಾರಿ, ತಹಶೀಲ್ದಾರ್, ಪೊಲೀಸ್ ಅಧಿಕಾರಿಗಳು ಪ್ರತಿದಿನ ವೀಕ್ಷಿಸಬಹುದು. ಭಕ್ತರ ಕಾಣಿಕೆಗಳಿಗೆ ರಶೀದಿ ನೀಡಲಾಗುವುದು. 3 ತಿಂಗಳಿಗೊಮ್ಮೆ ಆಡಿಟ್ ಮಾಡಲಾಗುವುದು ಎಂದರು.

ಈ ಎಲ್ಲದರ ಬಗ್ಗೆ ಅರ್ಚಕರು ಹಾಗೂ ಗ್ರಾಮಸ್ಥರ ಜೊತೆ ಪ್ರತ್ಯೇಕ ಸಭೆ ಮಾಡಿ ಚರ್ಚಿಸಲಾಗಿದೆ. ಎಲ್ಲರೂ ತೀರ್ಮಾನಕ್ಕೆ ಹರ್ಷ ವ್ಯಕ್ತಪಡಿಸಿ, ಅದಕ್ಕೆ ಬದ್ಧರಾಗಿರುವುದಾಗಿ ತಿಳಿಸಿದ್ದಾರೆ ಎಂದರು. ಹೊಳೆನರಸೀಪುರ ತಹಸೀಲ್ದಾರ್ ರೇಣುಕುಮಾರ್ ಇದ್ದರು.

# ವೀರಪ್ಪ ಸಾವು ಪ್ರಕರಣ: ಸಿಐಡಿ ತನಿಖೆಗೆ ಆಗ್ರಹ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಆಲೂರು ತಾಲ್ಲೂಕಿನ ರಾಜನಹಳ್ಳಿ ಗ್ರಾಮದ ಕೆಎಸ್‌ಆರ್‌ಟಿಸಿ ಚಾಲಕ ಆರ್.ಡಿ.ವೀರಪ್ಪ (58) ಅವರ ಅನುಮಾನಾಸ್ಪದ ಸಾವಿನ ಪ್ರಕರಣ ಘಟಿಸಿ ಏಳು ತಿಂಗಳಾದರೂ ಇನ್ನೂ ಸತ್ಯಾಸತ್ಯತೆ ಹೊರಬಂದಿಲ್ಲ.

ಹಾಗಾಗಿ ಸದರಿ ಪ್ರಕರಣವನ್ನು ಸಿಐಡಿಗೆ ವಹಿಸಿ ನಿಷ್ಪಕ್ಷಪಾತ ಹಾಗೂ ವೈಜ್ಞಾನಿಕ ತನಿಖೆ ನಡೆಸಬೇಕು ಎಂದು ದಲಿತ ಮತ್ತು ಜನಪರ ಸಂಘಟನೆಗಳ ಒಕ್ಕೂಟ ಆಗ್ರಹಿಸಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್, ಇದೇ ವರ್ಷದ ಫೆ.17 ರಂದು ವೀರಪ್ಪ ಅವರ ಮೃತದೇಹ ಜಮೀನಿನ ಕಲ್ಲು ಮಂಟಿಯಲ್ಲಿ ಶೇ.80ರಷ್ಟು ಸುಟ್ಟು ಕರಕಲಾದ ಸ್ಥಿತಿಯಲ್ಲಿ ಪತ್ತೆಯಾಗಿತ್ತು. ಇಷ್ಟೊಂದು ಪ್ರಮಾಣದಲ್ಲಿ ದೇಹ ಸುಟ್ಟಿರುವುದು ಹೇಗೆ, ಬೆಂಕಿ ಹೊತ್ತಿಕೊಂಡ ಸಂದರ್ಭವೇನು ಎಂಬುದರ ಕುರಿತು ಪೊಲೀಸರು ಈವರೆಗೂ ಸ್ಪಷ್ಟ ಉತ್ತರ ನೀಡಿಲ್ಲ ಎಂದು ಆರೋಪಿಸಿದರು.

ಜಮೀನು ವಿವಾದ, ಹಿಂದಿನ ಗಲಾಟೆ, ಹಲ್ಲೆ-ಬೆದರಿಕೆ ಹಾಗೂ ಅಕ್ರಮ ಮಣ್ಣು ಸಾಗಾಟಕ್ಕೆ ಸಂಬಂಧಿಸಿದ ವಿಚಾರಗಳನ್ನು ಕುಟುಂಬಸ್ಥರು ಪೊಲೀಸರ ಗಮನಕ್ಕೆ ತಂದಿದ್ದರೂ, ಸಮಗ್ರ ತನಿಖೆ ನಡೆಸದೆ ನಿರ್ಲಕ್ಷಿಸಲಾಗಿದೆ. ವೀರಪ್ಪ ಅವರದು ಆಕಸ್ಮಿಕ ಸಾವು ಎಂಬಂತೆ ಬಿಂಬಿಸುವ ಪ್ರಯತ್ನ ನಡೆಯುತ್ತಿದೆ ಎಂದು ದೂರಿದರು.

ವೀರಪ್ಪ ಅವರ ಅಣ್ಣ ಅಂಗವಿಕಲ ನಂಜಯ್ಯ ಅವರಿಗೆ ಪೊಲೀಸರು ಕಿರುಕುಳ ನೀಡಿ ತಪ್ಪೊಪ್ಪಿಗೆಗೆ ಒತ್ತಡ ಹೇರಿದ್ದಾರೆ ಹಾಗೂ ಖಾಲಿ ಹಾಳೆಯಲ್ಲಿ ಸಹಿ ಮಾಡಿಸಿಕೊಂಡಿದ್ದಾರೆ ಎಂದು ಕುಟುಂಬ ಸದಸ್ಯರು ಆರೋಪಿಸುತ್ತಿದ್ದು, ಈ ಬಗ್ಗೆಯೂ ಸ್ವತಂತ್ರ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಪ್ರಕರಣದ ಮೂರನೇ ಆರೋಪಿ ಹರೀಶ್ ಅವರ ಜಾಮೀನು ಅರ್ಜಿಯನ್ನು ನ್ಯಾಯಾಲಯ ತಿರಸ್ಕರಿಸಿರುವ ಹಿನ್ನೆಲೆಯಲ್ಲಿ ತನಿಖೆಯ ನೈಜ ದಿಕ್ಕಿನ ಬಗ್ಗೆಯೂ ಪ್ರಶ್ನೆಗಳು ಮೂಡಿವೆ ಎಂದ ಅವರು, ಮರಣೋತ್ತರ ಪರೀಕ್ಷೆ, ವಿಧಿವಿಜ್ಞಾನ ವರದಿ ಹಾಗೂ ಘಟನಾ ಸ್ಥಳದ ಸಾಕ್ಷ್ಯಗಳನ್ನು ಮರುಪರಿಶೀಲಿಸಿ, ಸಾವಿನ ನಿಖರ ಕಾರಣ ಬಹಿರಂಗಪಡಿಸಬೇಕು. ಇನ್ನಾದರೂ ತನಿಖೆ ಚುರುಕುಗೊಳ್ಳದಿದ್ದರೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ದಸಂಸ ಹಿರಿಯ ಮುಖಂಡರಾದ ಕೆರಗೋಡು ಸೋಮಶೇಖರ್, ಕೃಷ್ಣದಾಸ್, ನಂಜಯ್ಯ, ಮಾದಿಗ ದಂಡೋರ ವಿಜಯ್ ಕುಮಾರ್, ರಾಜಶೇಖರ್ ಇದ್ದರು.

# ಮೂಲಸ್ಥಾನ ಶ್ರೀ ಸ್ವರ್ಣಗೌರಮ್ಮ ದೇವಿ ದರ್ಶನಕ್ಕೆ ಭಕ್ತರ ದಂಡು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಮಾಡಾಳು: ರಾಜ್ಯದಲ್ಲಿಯೇ ಇತಿಹಾಸ ಪ್ರಸಿದ್ಧಿ ಹೊಂದಿರುವ ಗ್ರಾಮದ ಮೂಲಸ್ಥಾನ ಶ್ರೀ ಸ್ವರ್ಣಗೌರಮ್ಮ ದೇವಿ, ದರ್ಶನಕ್ಕೆ ಬರುವ ತನ್ನ ಭಕ್ತರಿಗೆ ದರ್ಶನ ಭಾಗ್ಯ ನೀಡುತ್ತಿದ್ದು, ವಿವಿಧೆಡೆಗಳಿಂದ ಬರುವ ಭಕ್ತರು ಹಗಲು ಇರುಳು ಎನ್ನದೆ ಸರತಿ ಸಾಲಿನಲ್ಲಿ ನಿಂತು ಅಮ್ಮನವರ ದರ್ಶನ ಪಡೆಯುತ್ತಿದ್ದಾರೆ.

ಭಾದ್ರಪದ ಮಾಸದ ತದಿಗೆ ದಿನದಂದು ಮೂಲ ಶ್ರೀ ಸ್ವರ್ಣಗೌರಿ ದೇವಿಯನ್ನು ಪ್ರತಿಷ್ಠಾಪಿಸಲಾಗಿದ್ದು, ರಾಜ್ಯದ ಮೂಲೆ ಮೂಲೆಯಿಂದ ಭಕ್ತರ ದಂಡು ಹರಿದು ಬರುತ್ತಿದೆ.

ಗುರುವಾರ ತಡರಾತ್ರಿ 1 ಗಂಟೆವರೆಗೂ ಸಹಸ್ರಾರು ಭಕ್ತರು ದರ್ಶನ ಪಡೆದು ದೇವಿಯ ಕೃಪೆಗೆ ಪಾತ್ರರಾದರು. ಹಾರನಹಳ್ಳಿ ಸುಕ್ಷೇತ್ರ ಕೋಡಿಮಠದ ಉತ್ತರಾಧಿಕಾರಿ ಶ್ರೀ ಚೇತನ್ ಮರಿದೇವರು ರಾತ್ರಿ 8 ಗಂಟೆಗೆ ಆಗಮಿಸಿ ದೇವಿಗೆ ಪೂಜೆ ಸಲ್ಲಿಸಿದರು. ನಂತರ ಭಕ್ತರನ್ನು ಉದ್ದೇಶಿಸಿ ಮಾತನಾಡಿದ ಸ್ವಾಮೀಜಿ, ನಾಡಿನ ನಾನಾ ಭಾಗಗಳಿಂದ ಅಮ್ಮನವರ ದರ್ಶನಕ್ಕೆ ಭಕ್ತರು ಬರುತ್ತಿದ್ದು, ಅವರಿಗೆ ಯಾವುದೇ ರೀತಿ ಅನನುಕೂಲ ಹಾಗೂ ತೊಂದರೆಯಾಗದಂತೆ ದರ್ಶನಕ್ಕೆ ಅವಕಾಶ ಮಾಡಿಕೊಡಬೇಕೆಂದು ಮತ್ತು ಅವರಿಗೆ ದಾಸೋಹ ವ್ಯವಸ್ಥೆ ಕಲ್ಪಿಸಬೇಕು ಎಂದು ದೇವಾಲಯದ ಆಡಳಿತ ಮಂಡಳಿಗೆ ಸೂಚಿಸಿದರು.

ಕೋಡಿಮಠದ ಮಹಾ ತಪಸ್ವಿ ಶಿವಲಿಂಗ ಸ್ವಾಮೀಜಿ ಒಂದು ಕೋಟಿ ಜಪ ಮಾಡಿ ಗೌರಮ್ಮ ದೇವಿಗೆ ಬಂಗಾರದ ಮೂಗುತಿಯನ್ನು ಆಶೀರ್ವದಿಸಿ ಮಾಡಾಳು ಗ್ರಾಮದ ತಮ್ಮ ಭಕ್ತ ಮುದ್ದೇಗೌಡರಿಗೆ ಕರುಣಿಸಿದ್ದರು.

ಈಗಿನ ನಮ್ಮ ಪೂಜ್ಯರು ಮೂಲ ಗೌರಮ್ಮ ದೇವಿಗೆ 150 ಲಕ್ಷ ರೂ.ವೆಚ್ಚದಲ್ಲಿ ನೂತನವಾಗ ಶಿಲಾ ದೇವಾಲಯ ನಿರ್ಮಿಸಿಕೊಟ್ಟಿದ್ದಾರೆ.

ಇದು ರಾಜ್ಯದಲ್ಲಿರುವ ಶಕ್ತಿ ಪೀಠಗಳಂತೆ ಮತ್ತೊಂದು ಶಕ್ತಿ ಪೀಠವಾಗಿ ಬೆಳೆದು ನಂಬಿ ಬರುವ ಭಕ್ತರ ಕಷ್ಟ ಕಾರ್ಪಣ್ಯ ಪರಿಹರಿಸಲಿದೆ ಎಂದು ಸ್ವಾಮೀಜಿ ತಿಳಿಸಿದರು. ಏನಳ್ಳಿ ಪ್ರಶಾಂತ್ ದೇವ್ರು, ಕೋಡಿ ಮಠದ ಏಜೆಂಟ್ ಹೆಚ್.ಸಿ ಮಹದೇವಪ್ಪ ಮೊದಲಾದವರಿದ್ದರು.

# ವಿದ್ಯಾರ್ಥಿಗಳಲ್ಲಿ ಕೃತಕ ಬುದ್ಧಿಮತ್ತೆಯ ಅರಿವು ಅಗತ್ಯ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಇಂದಿನ ಡಿಜಿಟಲ್ ಯುಗದಲ್ಲಿ ವಿದ್ಯಾರ್ಥಿಗಳು ಪೈಥಾನ್‌ನಂತಹ ಪ್ರೋಗ್ರಾಮಿಂಗ್ ಭಾಷೆಯ ಜೊತೆಗೆ ಜನರೇಟಿವ್ ಎಐ ಹಾಗೂ ಮೆಷಿನ್ ಲರ್ನಿಂಗ್ ಕುರಿತು ಅರಿವು ಹೊಂದುವುದು ಅಗತ್ಯವಾಗಿದೆ ಎಂದು ನಗರದ ಮಲೆನಾಡು ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ. ಎಸ್. ಪ್ರದೀಪ್ ಅವರು ಹೇಳಿದರು.

ಮಲೆನಾಡು ಎಂಜಿನಿಯರಿಂಗ್ ಕಾಲೇಜಿನ ಎಐ-ಮೆಷಿನ್ ಲರ್ನಿಂಗ್ ಹಾಗೂ ರೋಬೋಟಿಕ್ಸ್-ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ವಿಭಾಗಗಳ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ 'ಪೈಥಾನ್ ನಿಂದ ಕೃತಕ ಬುದ್ಧಿಮತ್ತೆವರೆಗೆ' ಕೌಶಲ್ಯ ಅಭಿವೃದ್ಧಿ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಉದ್ಯಮ ಕ್ಷೇತ್ರದ ಬೇಡಿಕೆಗಳಿಗೆ ಅನುಗುಣವಾಗಿ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವಲ್ಲಿ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳು ಮಹತ್ವದ ಪಾತ್ರ ವಹಿಸುತ್ತವೆ ಎಂದರು.

ವಿದ್ಯಾರ್ಥಿಗಳು ಶೈಕ್ಷಣಿಕ ಚಟುವಟಿಕೆಗಳಿಗೆ ಮಾತ್ರ ಸೀಮಿತರಾಗದೆ ಹ್ಯಾಕಥಾನ್‌ಗಳು ಹಾಗೂ ವಿವಿಧ ಕೌಶಲ್ಯಾಭಿವೃದ್ಧಿ ಕಾರ್ಯಾಗಾರಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ಇಂತಹ ಚಟುವಟಿಕೆಗಳು ಶೈಕ್ಷಣಿಕ ಜ್ಞಾನದೊಂದಿಗೆ ಪ್ರಾಯೋಗಿಕ ಕೌಶಲ್ಯಗಳನ್ನು ಬೆಳೆಸುವ ಮೂಲಕ ವಿದ್ಯಾರ್ಥಿಗಳನ್ನು ಉದ್ಯೋಗಕ್ಕೆ ಸಿದ್ಧಗೊಳಿಸುತ್ತವೆ ಎಂದು ತಿಳಿಸಿದರು.

# ಭಾನುವಾರ ಸಕಲೇಶಪುರಕ್ಕೆ ಸಿಎಂ

## ಕಸ್ತೂರಿ ರಂಗನ್ ವರದಿ ಜಾರಿ ಸಾಧಕ-ಬಾಧಕ: ಅಹವಾಲು ಸ್ವೀಕಾರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ವಿವಾದಿತ ಕಸ್ತೂರಿ ರಂಗನ್ ವರದಿ ಜಾರಿ ಸಂಬಂಧ ಮಲೆನಾಡ ಜನರ ಆತಂಕ ಹಾಗೂ ಆಕ್ಷೇಪಣೆ ಆಲಿಸಲು ಮತ್ತು ಕ್ಷೇತ್ರದ ಅಭಿವೃದ್ಧಿ ಬಗ್ಗೆ ಚರ್ಚಿಸಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭಾನುವಾರ ಪಟ್ಟಣಕ್ಕೆ ಆಗಮಿಸಲಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ಮುರಳಿ ಮೋಹನ್ ಹೇಳಿದರು.

ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂದು ಬೆಳಗ್ಗೆ ಎಪಿಎಂಸಿ ಆವರಣದಲ್ಲಿ ಕಾಫಿ ಬೆಳೆಗಾರರು, ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ಚರ್ಚೆ ನಡೆಸಲಿದ್ದಾರೆ ಎಂದರು.

ಕಸ್ತೂರಿರಂಗನ್ ವರದಿ ಸಂಬಂಧ ಎಲ್ಲರೂ ಮುಕ್ತವಾಗಿ ಸಿಎಂಗೆ ಮನವಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ ಎಂದರು.

ತಾಲೂಕಿನ ಅಚನಹಳ್ಳಿ, ಅಗನಿ, ಆಲುವಳ್ಳಿ, ಅರಣಿ, ಅತ್ತಿಹಳ್ಳಿ, ಬಾಣಗೇರಿ, ಬಾಳೆಹಳ್ಳಿ, ಬೆಟ್ಟೇಕುಮಾರಿ, ದೇವಿಹಳ್ಳಿ, ಹೆಗ್ಗದ್ದೆ, ಹೊಂಗಡಹಳ್ಳಿ, ಹೊಸಹಳ್ಳಿ, ಕಡಗರವಳ್ಳಿ, ಕಾಡುಮನೆ, ಕಾಗಿನಹರೆ ಸೇರಿದಂತೆ 31 ಗ್ರಾಮಗಳು ವಿವಾದಿತ ವರದಿಯಲ್ಲಿ ಸೇರಿವೆ ಸೇರಿವೆ ಎಂದು ತಿಳಿಸಿದರು.

ವರದಿ ಜಾರಿಯಾದಲ್ಲಿ ಅಭಿವೃದ್ಧಿ ಚಟುವಟಿಕೆ ಹಾಗೂ ಜನರ ದೈನಂದಿನ




ಅಗತ್ಯಗಳಿಗೆ ಸಂಬಂಧಿಸಿದ ಕಾಮಗಾರಿಗೆ ತಡೆ ಬೀಳಲಿದೆ. ರಸ್ತೆ, ಮನೆ, ಚರಂಡಿ, ಶೌಚಾಲಯ ಕಾಮಗಾರಿಗೂ ಅನುಮತಿ ಪಡೆಯಬೇಕಾದ ಪರಿಸ್ಥಿತಿ ನಿರ್ಮಾಣವಾಗಬಹುದು ಎಂಬ ಆತಂಕ ಜನರಲ್ಲಿದೆ ಎಂದರು.

ಈಗಾಗಲೇ ಡೀಮ್ಡ್ ಫಾರೆಸ್ಟ್ ಸೇರಿದಂತೆ ವಿವಿಧ ಅರಣ್ಯ ಸಂಬಂಧಿತ ಸಮಸ್ಯೆಗಳಿಂದ ಸಣ್ಣ ರೈತರು ಹಾಗೂ ಹಲವು ವರ್ಷಗಳಿಂದ ಜಮೀನು ಬಳಸಿಕೊಂಡು ಬರುತ್ತಿರುವ ಕುಟುಂಬಗಳು ತೊಂದರೆ ಅನುಭವಿಸುತ್ತಿವೆ. ಇಂತಹ ಸಂದರ್ಭದಲ್ಲಿ ಮತ್ತಷ್ಟು ನಿಯಂತ್ರಣ ಜಾರಿಯಾದರೆ ಮಲೆನಾಡಿನ ಜನಜೀವನದ ಮೇಲೆ ಗಂಭೀರ ಪರಿಣಾಮ ಬೀರಬಹುದು ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಎನ್. ರಾಮಚಂದ್ರ ಮಾತನಾಡಿ, ಕಸ್ತೂರಿ ರಂಗನ್ ವರದಿಯಿಂದ ಬಾಧಿತವಾಗಬಹುದಾದ ಪ್ರದೇಶಗಳ ಜನರ ಅಭಿಪ್ರಾಯಗಳನ್ನು ನೇರವಾಗಿ ಆಲಿಸುವುದು ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಸಿಎಂ ಅವರೇ ಆಗಮಿಸುತ್ತಿದ್ದು, ಸಾರ್ವಜನಿಕರು ತಮ್ಮ ಸಮಸ್ಯೆ ಹಾಗೂ ಆಕ್ಷೇಪಣೆಗಳನ್ನು ನೇರವಾಗಿ ಮಂಡಿಸಬೇಕೆಂದರು.

ರಾಜಕೀಯ ಪಕ್ಷಗಳು, ಸಂಘಟನೆಯವರು ಸೇರಿದಂತೆ ಪ್ರತಿಯೊಬ್ಬರೂ ಮನವಿ ಸಲ್ಲಿಸಲು ಅನುಕೂಲವಾಗುವಂತೆ ಪ್ರತ್ಯೇಕ ಕೌಂಟರ್ ವ್ಯವಸ್ಥೆ ಮಾಡಲಾಗುವುದು ಅಭಿಪ್ರಾಯ, ಆಕ್ಷೇಪಣೆ ಹಾಗೂ ಬೇಡಿಕೆಗಳನ್ನು ಲಿಖಿತವಾಗಿ ಸಲ್ಲಿಸಬೇಕೆಂದು ಮನವಿ ಮಾಡಿದರು.

ಕಾಂಗ್ರೆಸ್ ಮುಖಂಡ ಎಚ್.ಎಚ್. ಉದಯ್ ಮಾತನಾಡಿ, ಸಿಎಂ ಜೊತೆ ಅರಣ್ಯ ಸಚಿವ ರಾಮಲಿಂಗಾರೆಡ್ಡಿ, ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ, ಸಂಸದ ಶ್ರೇಯಸ್ ಪಟೇಲ್ ಮೊದಲಾದವರು ಆಗಮಿಸುತ್ತಿದ್ದು, ಪ್ರತಿಯೊಬ್ಬರೂ ತಮ್ಮ ತಮ್ಮ ಸಮಸ್ಯೆಗಳನ್ನು ನೇರವಾಗಿ ಮಂಡಿಸಲು ಇದು ಉತ್ತಮ ಅವಕಾಶವಾಗಿದೆ ಎಂದರು.

ಕಸ್ತೂರಿರಂಗನ್ ವರದಿ ಸಂಬಂಧ ಜನರ ಅಭಿಪ್ರಾಯ ಸಂಗ್ರಹಿಸಿ ಸರ್ಕಾರದ ಗಮನಕ್ಕೆ ತರಲು ನಡೆಯುತ್ತಿರುವ ಸಭೆಯಲ್ಲಿ ಬಾಧಿತ ಗ್ರಾಮಗಳ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ನಗರ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೈಯದ್ ಮುಫೀಜ್, ಮುಖಂಡರಾದ ಹಿತ್ತೈಷಿ, ಕಲ್ಗಣೆ ಪ್ರಶಾಂತ್ ಇದ್ದರು.

### ಮೊದಲ ಬಾರಿಗೆ ಜಿಲ್ಲೆಗೆ

ಡಿ.ಕೆ.ಶಿವಕುಮಾರ್ ಅವರು ಸಿಎಂ ಆದ ಬಳಿಕ ಇದೇ ಮೊದಲ ಬಾರಿಗೆ ಜಿಲ್ಲೆಗೆ ಆಗಮಿಸುತ್ತಿದ್ದಾರೆ. ಬೆಳಗ್ಗೆ 11 ಗಂಟೆಗೆ ಬೆಂಗಳೂರಿನ ಜಕ್ಕೂರು ವಿಮಾನ ನಿಲ್ದಾಣದಿಂದ ಹೆಲಿಕಾಪ್ಟರ್ ಮೂಲಕ ಹೊರಡುವ ಅವರು, 11.45ಕ್ಕೆ ಸಕಲೇಶಪುರಕ್ಕೆ ಆಗಮಿಸುವರು. ಕಸ್ತೂರಿರಂಗನ್ ವರದಿ ಜಾರಿಗೆ ಸಂಬಂಧಪಟ್ಟಂತೆ ಸ್ಥಳೀಯರಿಂದ ಅಹವಾಲು ಸ್ವೀಕಾರ ಮಾಡಿ ಬಳಿಕ ಎತ್ತಿನಹೊಳೆ ಯೋಜನೆ ಕಾಮಗಾರಿ ಬಗ್ಗೆ ವೈಮಾನಿಕ ಸಮೀಕ್ಷೆ ನಡೆಸಿ ಬೆಂಗಳೂರಿಗೆ ತೆರಳಲಿದ್ದಾರೆ.

# ಕ್ಯಾತನಹಳ್ಳಿ ಏತ ನೀರಾವರಿ ಯೋಜನೆ ಶೀಘ್ರ ಸಾಕಾರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಾಲೂಕಿನ ಕ್ಯಾತನಹಳ್ಳಿ ಏತ ನೀರಾವರಿ ಯೋಜನೆ ಕಾಮಗಾರಿ, ಹಲವು ವರ್ಷಗಳ ಹೋರಾಟದ ಫಲವಾಗಿ ಕಡದರವಳ್ಳಿ ಗಡಿಭಾಗದವರೆಗೆ ಪೂರ್ಣಗೊಂಡಿದ್ದು,

ನಮ್ಮ ಸರ್ಕಾರ ಬಾಕಿ ಯೋಜನೆಯನ್ನು ಶೀಘ್ರವಾಗಿ ಪೂರ್ಣಗೊಳಿಸಿ ಸಾಲಗಾಮೆ ಭಾಗದ ಎಲ್ಲ ಕೆರೆಗಳಿಗೆ ನೀರು ಹರಿಸಲಿದೆ ಎಂದು ಕಾಂಗ್ರೆಸ್ ಮುಖಂಡ ರಂಗಸ್ವಾಮಿ ಬನವಾಸೆ ತಿಳಿಸಿದರು.

ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ರೂಪಿಸಿದ ಯೋಜನೆಯಿಂದ ಕ್ಯಾತನಹಳ್ಳಿ ಕೆರೆಯಿಂದ ಉಗನೆ, ಸೀಗೆ ಹಾಗೂ ಸಾಲಗಾಮೆ ಗ್ರಾಪಂ ವ್ಯಾಪ್ತಿಯ ಎಲ್ಲ ಕೆರೆಗಳಿಗೆ ನೀರು ಹರಿಸುವ ಉದ್ದೇಶ ಇದೆ. ಆದರೆ ಕಾಮಗಾರಿ ಅರ್ಧಕ್ಕೆ ನಿಂತಿರುವುದರಿಂದ ಈ ಭಾಗದ ರೈತರಿಗೆ ಯೋಜನೆಯ ಸಂಪೂರ್ಣ ಪ್ರಯೋಜನ ದೊರೆಯುತ್ತಿಲ್ಲ ಎಂದು ಬೇಸರ ಹೊರ ಹಾಕಿದರು. ನಿನ್ನೆ ಜಿಲ್ಲೆಗೆ ಆಗಮಿಸಿದ್ದ ಜಲಸಂಪನ್ಮೂಲ ಸಚಿವ ಎನ್.ಚಲುವರಾಯಸ್ವಾಮಿ ಅವರಿಗೆ




ಪಕ್ಷದ ಮುಖಂಡರೊಂದಿಗೆ ಮನವಿ ಸಲ್ಲಿಸಲಾಗಿದ್ದು, ಯೋಜನೆಯನ್ನು ಶೀಘ್ರ ಕಾರ್ಯಗತಗೊಳಿಸುವ ಭರವಸೆ ನೀಡಿದ್ದಾರೆ ಎಂದರು.

ಯೋಜನೆಗೆ ಅಗತ್ಯವಿರುವ ಎಲ್ಲ ರೂಪುರೇಷೆ ಸಿದ್ಧಪಡಿಸಿ ಕಾಮಗಾರಿ ಮುಂದುವರಿಸುವಂತೆ ಅಧಿಕಾರಿಗಳಿಗೆ ಸಚಿವರು ಸೂಚಿಸಿದ್ದಾರೆ. ಏತ ನೀರಾವರಿ ಯೋಜನೆ ಪೂರ್ಣಗೊಂಡು ಕೆರೆಗಳು ತುಂಬಿದರೆ ಸಾಲಗಾಮೆ ಭಾಗದ ರೈತರಿಗೆ ಅನುಕೂಲ ಜೊತೆಗೆ ಜಾನುವಾರುಗಳಿಗೆ ನೀರು ಲಭ್ಯವಾಗಲಿದೆ. ಅಂತರ್ಜಲ ಮಟ್ಟ ವೃದ್ಧಿಯಾಗಲು ಸಹಕಾರಿಯಾಗಲಿದೆ. ಹೀಗಾಗಿ ಈ ಭಾಗದ ಜನರ ಹಿತದೃಷ್ಟಿಯಿಂದ ಯಾವುದೇ ವಿಳಂಬವಿಲ್ಲದೆ ಯೋಜನೆ ಪೂರ್ಣಗೊಳಿಸಬೇಕೆಂದರು. ಯೋಜನೆಗೆ ಸಂಬಂಧಿಸಿದ ಸಮಸ್ಯೆ ಬಗೆಹರಿಸಿ ಕಾಮಗಾರಿ ಪೂರ್ಣಗೊಳಿಸುವಂತೆ ಒತ್ತಾಯಿಸಿದ ಅವರು, ಅಲ್ಲಿವರೆಗೂ ಹೋರಾಟ ಮುಂದುವರಿಸುವುದಾಗಿ ತಿಳಿಸಿದರು.

ಇದರಲ್ಲಿ ಕ್ರೆಡಿಟ್‌ಗಾಗಿ ಯಾರೂ ರಾಜಕೀಯ ಬೆರೆಸುವುದು ಬೇಡ. ರೈತರಿಗೆ ಅನುಕೂಲ ಆಗಬೇಕಷ್ಟೆ. ಹಿಂದೆ ಬಿಜೆಪಿ ಸರ್ಕಾರ ಇದ್ದಾಗ ಈ ಬಗ್ಗೆ ಮೌನವಾಗಿದ್ದವರು, ಈಗ ಪ್ರತಿಭಟನೆ ನಾಟಕ, ಸಚಿವರಿಗೆ ವಿಡಿಯೋ ಕಾಲ್ ನಾಟಕ ಆಡುತ್ತಿರುವುದೇಕೆ ಎಂದು ಮಾಜಿ ಶಾಸಕ ಪ್ರೀತಂಗೌಡ ಅವರ ಹೆಸರು ಹೇಳದೆಯೇ ಟೀಕಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ರಘು ದಾಸರಕೊಪ್ಪಲು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಂದ್ರಶೇಖರ್, ಮುಖಂಡರಾದ ಬೂದೇಶ್, ಹರೀಶ್, ಅಶು, ರಂಗಸ್ವಾಮಿ ಇದ್ದರು.

# ಕಾಮನ್‌ಮ್ಯಾನ್ ನಾನೇ ಸಿಎಂ ಚಿತ್ರ ಬಿಡುಗಡೆ ಸೆ.25 ರಂದು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಾಮಾನ್ಯ ವ್ಯಕ್ತಿಯೊಬ್ಬನಿಗೆ ಅಧಿಕಾರ ದೊರೆತರೆ ಆಡಳಿತ ವ್ಯವಸ್ಥೆಯಲ್ಲಿ ಯಾವ ರೀತಿಯ ಬದಲಾವಣೆ ತರಬಹುದು ಎಂಬ ವಿಷಯವನ್ನು ಕಥಾಹಂದರವಾಗಿಸಿಕೊಂಡಿರುವ ಕಾಮನ್ ಮ್ಯಾನ್ ನಾನೇ ಸಿಎಂ ಕನ್ನಡ ಚಲನಚಿತ್ರ ಇದೇ ತಿಂಗಳ ಸೆ.25ರಂದು ರಾಜ್ಯಾದ್ಯಂತ ತೆರೆ ಕಾಣಲಿದೆ ಎಂದು ಕದಂಬ ಸೈನ್ಯ ರಾಜ್ಯಾಧ್ಯಕ್ಷ ಬೇಕ್ರಿ ರಮೇಶ್ ತಿಳಿಸಿದರು.

ನಗರದಲ್ಲಿಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾಜದಲ್ಲಿ ಹೆಚ್ಚಾಗಿರುವ ಭ್ರಷ್ಟಾಚಾರ, ಅನ್ಯಾಯ ಹಾಗೂ ಕಾನೂನು ಸುವ್ಯವಸ್ಥೆ ಹಾಗೂ ಜನಸಾಮಾನ್ಯರ ಸಮಸ್ಯೆಗಳ ಸುತ್ತ ಸಾಗುವ ಈ ನೂತನ ಚಿತ್ರವು, ಜನಪರ ಆಡಳಿತದ ಅಗತ್ಯವನ್ನು ಪ್ರತಿಪಾದಿಸುತ್ತದೆ.




ಅಧಿಕಾರವೆಂದರೆ ಕೇವಲ ರಾಜಕೀಯದ ಆಟವಲ್ಲ, ಜನರ ಬದುಕು ಬದಲಿಸುವ ಜವಾಬ್ದಾರಿ ಎಂಬ ಸಂದೇಶವನ್ನು ಚಿತ್ರ ಸಾರುತ್ತದೆ ಎಂದು ವಿವರಿಸಿದರು.

ಸುರಭಿ ಫಿಲಂಸ್ ಸಂಸ್ಥಾಪಕ ಅಧ್ಯಕ್ಷ, ಕಥೆ ಮತ್ತು ನಿರ್ಮಾಪಕರಾಗಿರುವ ರಂಗಭೂಮಿ ಕಲಾವಿದ ಡಾ.ಎನ್. ನರಸಿಂಹಮೂರ್ತಿ ಅವರು ಮುಖ್ಯಮಂತ್ರಿ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಜನರ ಸಂಕಷ್ಟಗಳಿಗೆ ಸ್ಪಂದಿಸಿ, ವ್ಯವಸ್ಥೆಯಲ್ಲಿ ಸುಧಾರಣೆ ತರುವ ಸಾಮಾನ್ಯ ವ್ಯಕ್ತಿಯೊಬ್ಬನ ಹೋರಾಟವೇ ಈ ಚಿತ್ರದ ಪ್ರಮುಖ ಕಥಾವಸ್ತು ಎಂದು ಹೇಳಿದರು. ಹಿರಿಯ ನಿರ್ದೇಶಕ ಓಂ ಸಾಯಿಪ್ರಕಾಶ್ ನಿರ್ದೇಶನದ ಚಿತ್ರದಲ್ಲಿ ರಾಜಕೀಯ ಅಧಿಕಾರಕ್ಕಾಗಿ ನಡೆಯುವ ಸಂಘರ್ಷ, ಪ್ರಜಾಪ್ರಭುತ್ವದ ಮೌಲ್ಯಗಳು ಹಾಗೂ ಜನಪರ ಯೋಜನೆಗಳ ಆಶಯವನ್ನು ಬಿಂಬಿಸಲಾಗಿದೆ. ಯುವಜನತೆಗೆ ನಾಯಕತ್ವ ಮತ್ತು ಸಾರ್ವಜನಿಕ ಜವಾಬ್ದಾರಿಯ ಕುರಿತು ಸ್ಫೂರ್ತಿ ನೀಡುವ ಪ್ರಯತ್ನ ಈ ಚಿತ್ರದಲ್ಲಿದೆ ಎಂದರು. ಯುವಕರು ಮುಖ್ಯಮಂತ್ರಿ ಹುದ್ದೆಯ ಜವಾಬ್ದಾರಿ ಹಾಗೂ ಜನಕಲ್ಯಾಣದ ಕರ್ತವ್ಯಗಳನ್ನು ಅರ್ಥಮಾಡಿಕೊಳ್ಳಲು ಚಿತ್ರ ಸಹಕಾರಿಯಾಗಲಿದೆ ಎಂದು ಇದೇ ವೇಳೆ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕದಂಬ ಸೈನ್ಯದ ನಾಗೇಶ್, ಪ್ರತಿಮಾ, ಕುಮಾರ್ ಹಾಗೂ ಪುಟ್ಟಸ್ವಾಮಿಗೌಡ ಉಪಸ್ಥಿತರಿದ್ದರು.

# ನಾಯಿ ಕಡಿದರೆ ತಕ್ಷಣ ವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಳೇಬೀಡು : ಕಾಡು ಪ್ರಾಣಿಗಳಲ್ಲಿ ರೇಬಿಸ್ ಹರಡುವುದು ತುಂಭಾ ಕಡಿಮೆ. ಬಹುತೇಕ ಎಲ್ಲ ರೀತಿಯ ಸಾಕು ಪ್ರಾಣಿಗಳಿಗೆ ರೇಬಿಸ್ ಹರಡುತ್ತದೆ. ಅದರಲ್ಲಿಯೂ ನಾಯಿಗೆ ಹೆಚ್ಚಿನ ಪ್ರಮಾಣದ ರೇಬಿಸ್ ಹರಡುತ್ತದೆ: ಕಾಡು ಪ್ರಾಣಿಗಳಲ್ಲಿ ರೇಬಿಸ್ ಹರಡುವುದು ತುಂಭಾ ಕಡಿಮೆ. ಬಹುತೇಕ ಎಲ್ಲ ರೀತಿಯ ಸಾಕು ಪ್ರಾಣಿಗಳಿಗೆ ರೇಬಿಸ್ ಹರಡುತ್ತದೆ. ಅದರಲ್ಲಿಯೂ ನಾಯಿಗೆ ಹೆಚ್ಚಿನ ಪ್ರಮಾಣದ ರೇಬಿಸ್ ಹರಡುತ್ತದೆ ಎಂದು ಹಿರಿಯ ಪಶು ವೈದ್ಯಾಧಿಕಾರಿ ಡಾ. ಎಂ. ವಿನಯ್ ಹೇಳಿದರು.

ಹಳೇಬೀಡಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಂತರಿಕ ಗುಣಮಟ್ಟ ಭರವಸಾ ಕೋಶ, ಯುವ ರೆಡ್ ಕ್ರಾಸ್ ಘಟಕ, ರಾಷ್ಟ್ರೀಯ ಸೇವಾ ಯೋಜನಾ ಘಟಕ ಹಾಗೂ ಹಳೇಬೀಡಿನ ಸರ್ಕಾರಿ ಪಶು ಆಸ್ಪತ್ರೆ ಆಶ್ರಯದಲ್ಲಿ ಶುಕ್ರವಾರ ನಡೆದ ರೇಬಿಸ್ ರೋಗ ಅರಿವು ಕಾರ್ಯಕ್ರಮದಲ್ಲಿ ಅವರು




ಮಾತನಾಡಿದರು.

ನಾಯಿ ಕಡಿತದಿಂದ ಆದಂತಹ ಗಾಯಕ್ಕೆ ಬಟ್ಟೆ ಸೋಪು ಹಾಕಿ ನೀರಿನಿಂದ ತೊಳೆಯಬೇಕು. ತಕ್ಷಣ ವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆ. ಪಡೆಯಬೇಕು. ಮಕ್ಕಳಿಗೆ ನಾಯಿ ಕಚ್ಚಿದಾಗ ಮನೆಯವರಿಗೆ ತಿಳಿಸದೆ ರೋಗ ಉಲ್ಬಣಿಸಿ ತೊಂದರೆ ಆಗುವ ಸಾಧ್ಯತೆ ಇರುತ್ತದೆ. ಪ್ರಾಣಿಗಳ ಒಡನಾಟದಲ್ಲಿರುವ ಮಕ್ಕಳ ಸುರಕ್ಷತೆಯತ್ತ ಪೋಷಕರು ಹೆಚ್ಚಿನ ಗಮನಹರಿಸಬೇಕು ಎಂದು ವಿನಯ್ ಹೇಳಿದರು.

ಪ್ರಾಣಿಗಳು ಕಚ್ಚಿದ ಅಥವ ಪರಚಿದ ಗಾಯಕ್ಕೆ ಯಾವುದೆ ಮನೆ ಮದ್ದು ಹಾಕಬಾರಾದು. ಗಾಯಕ್ಕೆ ಹೊಲಿಗೆ, ಗಟ್ಟಿಯಾದ ಬ್ಯಾಡೆಡ್ ಹಾಕಬಾರದು.

ಪ್ರಾಣಿಗಳಿಂದ ಮನುಷ್ಯರಿಗೆ ಹರಡುವ ರೇಬಿಸ್ ರೋಗ ಶೇ.100 ರಷ್ಟು ಮಾರಾಣಾಂತಿಕವಾಗಿರುತ್ತದೆ. ಎಚ್ಚರವಹಿಸಿದರೆ, ಶೇ100ರಷ್ಟು ನಿಯಂತ್ರಿಸಲು ಅವಕಾಶವಿದೆ

. ಜಾನುವಾರುಗಳಿಗೆ ನಾಯಿ ಕಚ್ಚಿರುವುದು ಮಾಲೀಕರ ಗಮನಕ್ಕೆ ಬಾರಾದೆ, ಅವುಗಳು ರೋಗದಿಂದ ಸಾಯುವ ಸಾಧ್ಯತೆ ಇರುತ್ತದೆ. ಜಾನುವಾರುಗಳತ್ತ ಮಾಲೀಕರು ಎಚ್ಚರವಹಿಸಬೇಕು. ಬೆಕ್ಕುಗಳಿಗೆ ಮುಖಕ್ಕೆ ಮುಖ ಕೊಟ್ಟು ಮುದ್ದು ಮಾಡಬಾರಾದು. ಬೀದಿ ನಾಯಿಗಳನ್ನು ಕೆಣಕಿದರೆ ಕಚ್ಚುವ ಸಾಧ್ಯತೆ ಇರುತ್ತದೆ ಎಂದು ವಿನಯ್ ವಿವರಿಸಿದರು.

ಆಯ್ಕೆ ಶ್ರೇಣಿ ಗ್ರಂಥಪಾಲಕ ಡಾ. ಮನೋಜ್ ಕುಮಾರ್. ಕೆ.ಎಸ್ ಮಾತನಾಡಿ ಸಾಕ್ರಾಮಿಕ ರೋಗಗಳಿಂದ ಕೆಲವು ನಾಗರೀಕತೆಗಳೆ ನಾಶವಾಗಿವೆ. ಸಾಕ್ರಾಮಿಕ ರೋಗ ಪ್ರಕೃತಿ ವಿಕೋಪ, ಅಪಘಾತ, ಬೆಂಕಿ ಅವಘಡಗಳಿಗಿಂತ ಭೀಕರವಾಗಿರುತ್ತದೆ. ಎಚ್ಚರವಹಿಸಿದರೆ ಸಾಕ್ರಾಮಿಕ ರೋಗದಿಂದ ಮುಕ್ತರಾಗಬಹುದು ಎಂದರು.

ಪ್ರಾಚಾರ್ಯ ಡಾ.ಶ್ರೀನಿವಾಸ್.ಬಿ.ಕೆ. ಮಾತನಾಡಿ, ನಾಯಿ, ಬೆಕ್ಕು ಊರಿನಲ್ಲಿ ವಾಸಿಸುವುದರಿಂದ ಮಾನವ ಅವುಗಳ ಸಂಪರ್ಕದಲ್ಲಿ ಇರಬೇಕು. ಆದರೆ ಎಚ್ಚರಿಕೆಯಿಂದ ಇರಬೇಕು ಎಂದರು.

ಪ್ರಾಧ್ಯಾಪಕರಾದ ಶಂಕರಪ್ಪ. ಜಿ.ಆರ್, ರಾಘವೇಂದ್ರ, ಚಂದ್ರಶೇಖರ ಸಿಂಗ್, ಶಿವರಾಜ್ ಕುಮಾರ್, ಡಾ. ತಿಮ್ಮನಾಯ್ಕ, ಕಾಲೇಜಿನ ಹಿತೈಷಿ ಎಚ್.ಎಸ್.ಅನಿಲ್ ಕುಮಾರ್ ಭಾಗವಹಿಸಿದ್ದರು. ವಿದ್ಯಾರ್ಥಿಗಳಾದ ಸಹನಾ ನಿರೂಪಿಸಿದರು. ಧನ್ಯ ಸ್ವಾಗತಿಸಿದರು. ತಾಹಿದ್ ಪ್ರಾರ್ಥಿಸಿದರು.

# ಕುಂಭೇನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ 12.95 ಲಕ್ಷ ರೂ. ನಿವ್ವಳ ಲಾಭ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಶ್ರವಣಬೆಳಗೊಳ: ಹೋಬಳಿಯ ಕುಂಭೇನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘವು ಪ್ರಸಕ್ತ ಸಾಲಿನಲ್ಲಿ 12.95 ಲಕ್ಷ ರೂ. ನಿವ್ವಳ ಲಾಭ ಗಳಿಸಿದ್ದು, ಸಂಘದ ಅಭಿವೃದ್ಧಿಗೆ ನಿರ್ದೇಶಕರು, ಷೇರುದಾರರು ಹಾಗೂ ಹಾಲು ಉತ್ಪಾದಕರ ಸಹಕಾರವೇ ಪ್ರಮುಖ ಕಾರಣವಾಗಿದೆ ಎಂದು ಸಂಘದ ನಿರ್ದೇಶಕ ರಾಘು ಕದಂಬ ಹೇಳಿದರು.

ಗ್ರಾಮದಲ್ಲಿ ನಡೆದ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, 2024-25ನೇ ಸಾಲಿನಲ್ಲಿ ಸಂಘವು 6.75 ಲಕ್ಷ ರೂ. ನಿವ್ವಳ ಲಾಭ ಗಳಿಸಿದ್ದ ಸಂಘವು, ಪ್ರಸಕ್ತ ಸಾಲಿನಲ್ಲಿ 12.95 ಲಕ್ಷ ರೂ. ಲಾಭ ಗಳಿಸಿದೆ. ಸಂಘದ ಆಡಳಿತ ಮಂಡಳಿ ಹಾಗೂ ಹಾಲು ಉತ್ಪಾದಕರ ಸಹಕಾರದಿಂದಾಗಿ ಹಿಂದೆಂದಿಗಿಂತಲೂ ಈ



ಸಾಧನೆ ಸಾಧ್ಯವಾಗಿದೆ ಎಂದರು.

ಯಾವುದೇ ಸಂಘ-ಸಂಸ್ಥೆ ಯಶಸ್ವಿಯಾಗಿ ಮುನ್ನಡೆಯಬೇಕಾದರೆ ಹಿರಿಯರ ಅನುಭವ ಹಾಗೂ ಮಾರ್ಗದರ್ಶನದೊಂದಿಗೆ ಯುವಕರಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಯುವ ಸಮುದಾಯ ಸ್ವಪ್ರೇರಣೆಯಿಂದ ಸಂಘದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಾಗ ಅಭಿವೃದ್ಧಿ ಮತ್ತಷ್ಟು ವೇಗ ಪಡೆಯಲಿದೆ ಎಂದು ಹೇಳಿದರು.

ಮಹಾಸಭೆಯಲ್ಲಿ ಪಾಲ್ಗೊಂಡಿದ್ದ ರೈತರು ಒಕ್ಕೂಟದ ಮೂಲಕ ಮ್ಯಾಟ್, ಸೈಲೇಜ್ ಬ್ಯಾಗ್ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಒದಗಿಸಬೇಕು ಎಂದು ಒತ್ತಾಯಿಸಿದರು. ಜಾನುವಾರುಗಳಿಗೆ ಕಾಲುಬಾಯಿ ಸೇರಿದಂತೆ ವಿವಿಧ ಕಾಯಿಲೆಗಳು ಕಾಣಿಸಿಕೊಂಡಾಗ ತ್ವರಿತವಾಗಿ ಚಿಕಿತ್ಸೆ ನೀಡಲು ಪಶುವೈದ್ಯರನ್ನು ನೇಮಕ ಮಾಡಬೇಕು. ಪ್ರಸ್ತುತ ಇರುವ ಬಿಎಂಸಿ ಕೇಂದ್ರದ ಸಾಮರ್ಥ್ಯವನ್ನು 3 ಸಾವಿರ ಲೀಟರ್‌ಗೆ ಹೆಚ್ಚಿಸಬೇಕು ಎಂದು ಮನವಿ ಮಾಡಿದರು.

ರೈತರ ಬೇಡಿಕೆಗಳಿಗೆ ಪ್ರತಿಕ್ರಿಯಿಸಿದ ಹಾಸನ ಸಹಕಾರಿ ಹಾಲು ಒಕ್ಕೂಟದ ವಿಸ್ತರಣಾಧಿಕಾರಿ ಟಿ.ಎಸ್.ಪ್ರಶಾಂತ್, ಎಲ್ಲ ಬೇಡಿಕೆಗಳನ್ನು ಒಕ್ಕೂಟದ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ಚರ್ಚಿಸಲಾಗುವುದು. ಸಾಧ್ಯವಾದಷ್ಟು ಶೀಘ್ರದಲ್ಲಿ ಬೇಡಿಕೆಗಳನ್ನು ಈಡೇರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಗೋವಿಂದರಾಜು, ವಿಸ್ತರಣಾಧಿಕಾರಿ ಎಂ. ದಯಾನಂದ, ಗ್ರಾಮ ಪಂಚಾಯಿತಿ ಸದಸ್ಯ ಕೆ.ಟಿ.ಸೋಮಶೇಖರ್, ಕೆ.ಎಸ್.ಮಂಜಶೆಟ್ಟಿ, ಕಲ್ಪನಾ ಸತೀಶ್, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದ ಅಧ್ಯಕ್ಷ ಡಿ.ಕೃಷ್ಣ, ನಿರ್ದೇಶಕರಾದ ಕೆ. ಲೋಕೇಶ್, ಪ್ರವೀಣ್ ಕುಮಾರ್, ಡಿ.ಹಿರಿಯಣ್ಣ, ಕೆ.ಕುಮಾರ್, ಕೆ.ಚಂದ್ರಶೇಖರ್, ಕೆ.ಎನ್.ಕೃಷ್ಣೇಗೌಡ, ಕೆ.ಎಸ್.ರಾಜೇಶ್, ಯೋಗೇಶ್, ನಾಗರತ್ನ ಮೋಹನ್ ಕುಮಾರ್, ಲಕ್ಷ್ಮಮ್ಮ ಜವರಪ್ಪ, ಕಾರ್ಯದರ್ಶಿ ಕೆ.ಟಿ.ಶೇಷ, ಹಾಲು ಪರೀಕ್ಷಕ ಡಿ.ರೇವಣ್ಣ ಸೇರಿದಂತೆ ಷೇರುದಾರರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಮುಸ್ಲಿಂ ಮುಖಂಡರಿಂದ ಗಣಪತಿ ದರ್ಶನ, ಸೌಹಾರ್ದ ಪ್ರದರ್ಶನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಶಾಂತಿ ಮತ್ತು ಸಾಮರಸ್ಯಕ್ಕೆ ಹೆಸರಾಗಿರುವ ಸಕಲೇಶಪುರದಲ್ಲಿ ಮುಸ್ಲಿಂ ಸಮುದಾಯದ ಮುಖಂಡರು ಗಣೇಶೋತ್ಸವ ಮಂಟಪಕ್ಕೆ ಭೇಟಿ ನೀಡಿ ಗಣಪತಿ ದರ್ಶನ ಪಡೆಯುವ ಮೂಲಕ ಅಪೂರ್ವ ಸೌಹಾರ್ದತೆ ಮೆರೆದರು. ನಮ್ಮ ಹಿರಿಯರು ಹಾಕಿಕೊಟ್ಟ ಈ ಸೌಹಾರ್ದತೆಯ ಪರಂಪರೆಯನ್ನು ಮುಂದಿನ ಪೀಳಿಗೆಯೂ ಮುಂದುವರಿಸಿಕೊಂಡು ಹೋಗಬೇಕು ಎಂದು ಈ ಸಂದರ್ಭದಲ್ಲಿ ಪ್ರಾರ್ಥಿಸಿ, ಆಶಯ ವ್ಯಕ್ತಪಡಿಸಲಾಯಿತು.

ಇದೇ ವೇಳೆ ಗಣಪತಿ ಸೇವಾ ಸಮಿತಿಯ ಪ್ರಮುಖರಿಗೆ ಹಾರ-ಶಾಲು ಹಾಕಿ ಗೌರವಪೂರ್ವಕವಾಗಿ ಸನ್ಮಾನಿಸಿ, ಪ್ರೀತಿ-ವಿಶ್ವಾಸ ಹಂಚಿಕೊಂಡರು. ಪ್ರತಿಯಾಗಿ ಗಣಪತಿ ಸೇವಾ ಸಮಿತಿಯವರು ಮುಸ್ಲಿಂ ಮುಖಂಡರಿಗೆ ಪ್ರಸಾದ ನೀಡಿ ಆತ್ಮೀಯವಾಗಿ ಗೌರವಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಕಲೇಶಪುರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಸಯ್ಯದ್ ಮುಫೀಸ್, "ಪಟ್ಟಣದಲ್ಲಿ ನಡೆಯುವ ರಥೋತ್ಸವ, ಗಣೇಶೋತ್ಸವ ಸೇರಿದಂತೆ ಎಲ್ಲಾ ಧಾರ್ಮಿಕ ಹಾಗೂ ಸಾಮಾಜಿಕ ಆಚರಣೆಗಳಲ್ಲಿ ಜಾತಿ-ಧರ್ಮದ ಭೇದ ಮರೆತು ಎಲ್ಲರೂ ಒಂದಾಗಿ ಪಾಲ್ಗೊಳ್ಳುತ್ತಿರುವುದು ನಮ್ಮ ನೆಲದ ಹೆಮ್ಮೆಯ ಪ್ರತೀಕ.

ನಮ್ಮ ಹಿರಿಯರು ಉಳಿಸಿ ಬೆಳೆಸಿಕೊಂಡು ಬಂದಿರುವ ಈ ಸೌಹಾರ್ದತೆಯ ಪರಂಪರೆಯನ್ನು ಮುಂದಿನ ಪೀಳಿಗೆಗೂ ಜೀವಂತವಾಗಿ ಕೊಂಡೊಯ್ಯುವ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಕೈಜೋಡಿಸಬೇಕು," ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಪುರಸಭೆ ಮುಖ್ಯಾಧಿಕಾರಿ ಮಹೇಶ್ವರಪ್ಪ, ರೋಟರಿ ಸಂಸ್ಥೆಯ ಅಧ್ಯಕ್ಷ ರವಿಕುಮಾರ್, ಗಣಪತಿ ಸೇವಾ ಸಮಿತಿ ಅಧ್ಯಕ್ಷ ಎಸ್.ಡಿ. ಸತೀಶ್, ಪ್ರಮುಖರಾದ ರವಿಕುಮಾರ್ ಆನೆಮಹಲ್, ಹಸ್ಸೆನಾರ್, ನಂದಿಕೊಪ್ಪ ರಾಜು, ರಮೇಶ್, ಉಮೇಶ್, ಸೂರಿ, ಮಹೇಶ್, ಡ್ರಗ್ಸ್ ಮುಕ್ತ ಸಕಲೇಶಪುರ ಆಂದೋಲನದ ಸಂಚಾಲಕ ಮಲ್ನಾಡ್ ಮೆಹಬೂಬ್, ಕಾಂಗ್ರೆಸ್ ಅಲ್ಪಸಂಖ್ಯಾತರ ವಿಭಾಗದ ಅಧ್ಯಕ್ಷ ಮಹಮ್ಮದ್ ಹನೀಫ್, ಮಂಜರಾಬಾದ್ ದರ್ಗಾ ಸಮಿತಿಯ ಸದಸ್ಯ ಫ್ರೂಟ್ ಜಾಬೀರ್, ಸಾಮಾಜಿಕ ಕಾರ್ಯಕರ್ತ ಇದ್ರಿಸ್, ಜಮೀಲ್ ಅಹಮದ್, ಶರೀಫ್, ರಿಜ್ವಾನ್ ಕಾರ್ಪೆಂಟರ್, ಹೈದರ್ ಮಹಮದೀಯ, ಜುಬೇರ್ ಶಾಮಿಯಾನ, ಖಾಸಿಂ ಕಾಕು, ಶರೀಫ್ ಆನೆಮಹಲ್, ಚಾಂದ್ ಪಾಷಾ, ಜಾಕೀರ್ ಶಾಮಿಯಾನ, ಹನೀಫ್, ಇಬ್ರಾಹಿಂ, ಅನ್ವರ್ ಜುನೈದ್ ಸೇರಿದಂತೆ ಎರಡೂ ಸಮುದಾಯಗಳ ಹಲವು ಮುಖಂಡರು ಉಪಸ್ಥಿತರಿದ್ದರು.

# ಸೂಕ್ತ ರಕ್ಷಣೆಗೆ ರೈತ ಮನವಿ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಕಲೇಶಪುರ ತಾಲೂಕು ಯಸಳೂರು ಹೋಬಳಿ ತೊಂತಲಾಪುರ ಗ್ರಾಮದ ಪಿತ್ರಾರ್ಜಿತ ಜಮೀನಿನಲ್ಲಿ ಕೃಷಿ ಕೆಲಸ ಮಾಡಲು ಬಿಡದೆ ಬೆದರಿಕೆ ಹಾಕಲಾಗುತ್ತಿದೆ. ತಮಗೆ ಪೊಲೀಸರು ಸೂಕ್ತ ರಕ್ಷಣೆ ನೀಡಬೇಕೆಂದು ಹೇರೂರು ಗ್ರಾಮದ ಎಚ್.ಡಿ. ಧರ್ಮಪ್ಪ ಹಾಗೂ ಮಂಜುನಾಥ್ ಮನವಿ ಮಾಡಿದರು.

ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜಮೀನನ್ನು ತಂದೆ ಹಾಗೂ ಚಿಕ್ಕಪ್ಪ ಅವರು ಜಂಟಿಯಾಗಿ ಖರೀದಿಸಿದ್ದರು. ಇತ್ತೀಚೆಗೆ ಚಿಕ್ಕಪ್ಪ ಮರಣ ನಂತರ ಅವರ ಪತ್ನಿ ಎಚ್.ಡಿ.

ಸರೋಜಮ್ಮ ಹೆಸರಿನಲ್ಲಿದ್ದ ಆಸ್ತಿ ವಿಚಾರದಲ್ಲಿ ವಿವಾದ ಉಂಟಾಗಿದೆ. ಸರೋಜಮ್ಮ ಪಾರ್ಶ್ವವಾಯು ತೊಂದರೆಯಿಂದ ದೇಹದ ಎಡಭಾಗ ಸ್ವಾಧೀನ ಕಳೆದುಕೊಂಡು, ಆಲೋಚನಾ ಶಕ್ತಿಯೂ ಕುಂಠಿತವಾಗಿದೆ. ಅನಾರೋಗ್ಯ ಮಹಿಳೆಯ ಬಲಗೈ ಹೆಬ್ಬೆರಳ ಗುರುತನ್ನು ಅವರ ಸಹೋದರ ಎನ್.ಬಿ. ನಾಗರಾಜ್ ಎಂಬುವರು ಬಲವಂತವಾಗಿ ಪಡೆದು, ಸೋಮವಾರಪೇಟೆ ಉಪನೋಂದಣಾಧಿಕಾರಿ ಕಚೇರಿಯಲ್ಲಿ ದಾನಪತ್ರ ಮಾಡಿಸಿಕೊಂಡಿದ್ದಾರೆ ಎಂದು ಆರೋಪಿಸಿದರು.

ಸದರಿ ವಿವಾದ ಸಕಲೇಶಪುರ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ. ಆದರೂ ದಾನಪತ್ರದ ಆಧಾರದ ಮೇಲೆ ಎನ್.ಬಿ.ನಾಗರಾಜ್ ಹಾಗೂ ಕಟ್ಟೆಗದ್ದೆ ನಾಗರಾಜ್ ಎಂಬುವರ ಮಧ್ಯಸ್ಥಿಕೆಯಲ್ಲಿ ಉನ್ನಿಕೃಷ್ಣನ್ ಎಂಬುವವರಿಗೆ 2024, ಆ.19 ರಂದು ಜಮೀನನ್ನು ಮಾರಾಟ ಮಾಡಲಾಗಿದೆ. ಜಮೀನು ತಮ್ಮ ಸ್ವಾಧೀನದಲ್ಲಿದ್ದು, ಕೃಷಿ ಮಾಡುವಾಗ ಉನ್ನಿಕೃಷ್ಣನ್ ಮತ್ತವರ ಬೆಂಬಲಿಗರು ಸ್ಥಳಕ್ಕೆ ಬಂದು ಅವಾಚ್ಯ ಶಬ್ದಗಳಿಂದ ನಿಂದಿಸಿ, ಕೃಷಿ ಮುಂದುವರಿಸಿದರೆ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಬೆದರಿಕೆ ಹಾಕಿದ್ದಾರೆ ಎಂದರು.

ಈ ನಡುವೆ ಯಸಳೂರು ಠಾಣೆ ಪೊಲೀಸರು, ತಮ್ಮ ವಿರುದ್ಧವೇ ಎಫ್‌ಐಆರ್ ದಾಖಲಿಸುವುದಾಗಿ ಬೆದರಿಕೆ ಹಾಕಿದ್ದಾರೆ. ನನ್ನ ಪುತ್ರ ದರ್ಶನ್ ಎಚ್.ಡಿ. ವಿರುದ್ಧವೂ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಅಳಲು ತೋಡಿಕೊಂಡರು. ನ್ಯಾಯಾಲಯ ತೀರ್ಪು ನೀಡುವವರೆಗೂ ಕಾನೂನು ಬದ್ಧವಾಗಿ ತಮ್ಮ ಹಕ್ಕು ರಕ್ಷಿಸಿಕೊಳ್ಳಲು ಅವಕಾಶ ನೀಡಬೇಕು. ತಮ್ಮ

ಕುಟುಂಬಕ್ಕೆ ಮತ್ತು ಕೃಷಿ ಕೆಲಸ ಮಾಡಲು ಸೂಕ್ತ ರಕ್ಷಣೆ ನೀಡಬೇಕೆಂದು ದಾನಪತ್ರ ಹಾಗೂ ಮಾರಾಟಕ್ಕೆ ಸಂಬಂಧಿಸಿದ ದಾಖಲೆ ಇತ್ಯಾದಿ ಬಗ್ಗೆ ತನಿಖೆ ನಡೆಸಿ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದರು. ಪತ್ರಿಕಾಗೋಷ್ಠಿಯಲ್ಲಿ ಲೋಕೇಶ್ ಮೊದಲಾದವರಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248